ಕುತೂಹಲವಾಯ್ತು ಕೇತಕಿಗೆ. ನಾಲ್ಕು ಗಟ್ಟಿ ಕಂಬಗಳ ಮೇಲೆ ಪುಟ್ಟ ಕೋಣೆಯಂತೆ ಅವನ ಮರದ ಮನೆಯಿತ್ತು. ಮರದ ನಾಲ್ಕು ಮೆಟ್ಟಿಲನ್ನು ಹಗ್ಗ ಹಿಡಿದು ಹತ್ತಿದವಳಿಗೆ ಒಳಗಿನ ಸಣ್ಣ ರೂಮಿನ ವ್ಯವಸ್ಥೆ ಅಚ್ಚರಿ ಹುಟ್ಟಿಸಿತು. ಮೇಲೆ ಸೋಗೆಯ ಮಾಡು. ಕಾಲು ಚಾಚಿ ಮಲಗುವಂತೆ ಸಣ್ಣ ಹಾಸಿಗೆಯ ಸುರುಳಿ, ದಿಂಬು ಅಲ್ಲಿದ್ದವು. ಜಿಡ್ಡು ಕೃಷ್ಣಮೂರ್ತಿ ಮತ್ತು ಆನಂದಾಶ್ರಮದ ಅಜ್ಜನ ಪುಸ್ತಕಗಳನ್ನು ಜೋಡಿಸಿಡಲಾಗಿತ್ತು. ಕಣ್ಣಿಗೆ ಬೀಳುವ ಹಾಗೆ ನೇತಾಡುತ್ತಿದ್ದ ಕೈಯಲ್ಲಿ ಬರೆದ ಸುಭಾಷಿತದ ಕಾರ್ಡ್‌ನಲ್ಲಿ – **"I love to think of nature As an unlimited broadcasting station, through which God speaks to us every hour, if we will only tune in– George Washington"** ಎಂದಿತ್ತು. ಸಂದೀಪನತ್ತ ತಿರುಗಿ ನೋಡಿದಳು. ಶಾಂತ ಕಣ್ಣುಗಳು. ಕಣ್ಣು ಮಿಟುಕಿಸಿ ನಕ್ಕು ಮಾಡಿನ ಒಂದು ಮೂಲೆಯಲ್ಲಿದ್ದ ಪುಟ್ಟ ಗೂಡನ್ನು ತೋರಿಸಿದ. ಯಾವಾಗಲೋ ಗೂಡು ಕಟ್ಟಿ ಮರಿ ಮಾಡಿ ಹಾರಿ ಹೋದ ಹಕ್ಕಿಗೂಡು. 'ಇಲ್ಲಿ ಬಾ, ಕುತ್ಕೊ' ಎಂದವನ ಪಕ್ಕ ಕೂತಳು.

ಎದುರಿನ ಮರದತ್ತ ಕೈ ತೋರಿ,

'ನೋಡು, ಅಲ್ಲಿ ಪ್ರತಿದಿನ ಕೆಂಪು ಬಣ್ಣದ ಹಕ್ಕಿಯೊಂದು ಬಂದು ಕೂತು ಹಾಡುತ್ತದೆ. ಅದ್ಭುತ ಕೇತಕಿ! ಸಿಂಪ್ಲಿ ಅಮೇಝಿಂಗ್. ಎಷ್ಟು ಸರಳ, ಎಷ್ಟು ಸಹಜ ಅದರ ಬದುಕು, ಅದರ ಹಾಡು! ಅದರ ಮೇಟಿಂಗ್ ಸೀಸನ್ನಿನಲ್ಲಿ ಕೂತು ಸಂಗಾತಿಯನ್ನು ಕರೀತದೆ. ಹೆಣ್ಣು ಹಕ್ಕಿನೂ ಬರುತ್ತೆ, ಗೂಡು ಕಟ್ಟುತ್ತದೆ, ಜೋಡಿಯಾಗಿ ಮೊಟ್ಟೆ ಇಟ್ಟು ಮರಿ ಮಾಡಿ, ಮರಿಗಳನ್ನು ತಾನೇ ಗೂಡಿಂದ ಹೊರಗೂ ಹಾಕುತ್ತೆ. ಬದುಕಿನ ಸೈಕಲನ್ನು ಅವು ತಿಳಿದಷ್ಟು ಸರಳವಾಗಿ ನಾವ್ಯಾಕೆ ಅರ್ಥ ಮಾಡಿಕೊಂಡಿಲ್ಲ?' ಎಂದ.

ಪ್ರೀತಿ ಉಕ್ಕಿತು ಸಂದೀಪನ ಮೇಲೆ. ಹಿತವಾಗಿ ಕೈ ಹಿಡಿದು ಅಮುಕಿದಳು. ನಕ್ಕ ಸಂದೀಪ, 'ಏನು ಟೀಚರಮ್ಮನಿಗೆ ಈ ಬಡಪಾಯಿ ಮೇಲೆ ಪ್ರೀತಿ ಆದಂತಿದೆ, ಜಾಗ್ರತೆ ಮಾರಾಯ್ತಿ! ನಾನೊಂಥರಾ ಮನುಷ್ಯ. ಮೂಡಿ ಬೇರೆ! ನಿನ್ನ ಪ್ರೀತಿ, ಎಮೋಶನ್ನು ಸುಮ್ನೆ ಖರ್ಚು ಮಾಡ್ಬೇಡಾ' ಎಂದಾಗ ಸ್ವಚ್ಛಂದವಾಗಿ ನಕ್ಕಳು. ಸ್ವಲ್ಪ ಹೊತ್ತು ಹರಟಿ ಮನೆಗೆ ಬಂದ ಕೇತಕಿಗೆ ಮೈ ಪೂರ್ತಿ ಕಂಪನ. ಸಂದೀಪ ಪೂರ್ತಿ ಇಷ್ಟವಾಗಿದ್ದ.

ರಾತ್ರಿ ರೂಮಿಗೆ ಬಂದ ಅವಳಲ್ಲಿ ಆದ ಬದಲಾವಣೆಗಳನ್ನು ಸಂದೀಪ ಗಮನಿಸಿದ. ಅವನಲ್ಲೂ ಈ ಕೇತಕಿ ಬೇರೆ ಹೆಣ್ಣುಮಕ್ಕಳಂತೆ ಅಲ್ಲ ಅನ್ನೋದು ತಿಳಿದು ಮುದಗೊಂಡಿದ್ದ. ಒಳಗೆ ಬಂದವಳನ್ನು ಹಿತವಾಗಿ ಅಪ್ಪಿಕೊಂಡ. 'ಇದನ್ನೇ ಕೇತಕಿ ಬೇಡವೆಂದಿದ್ದು. ನಾನು ಯಾವುದರ, ಯಾರ ಸುಳಿಗೂ ಸಿಕ್ಕದೇ ಬದುಕಬೇಕೆಂದವನು. ಸ್ನೇಹಿತರ ಮದ್ವೆಗಳನ್ನೂ ನೋಡಿದ್ದೇನೆ. ಮದ್ವೆಯ ಆರಂಭದ ದಿನಗಳಲ್ಲಿ ಇದ್ದ ಸಂತೋಷ ದಿನಕಳೆದಂತೆ ಒಂದು ಉದಾಸೀನಕ್ಕೆ ಬಂದು ನಿಲ್ಲುತ್ತದೆ. ಹಾಗಾದರೆ ಅಲ್ಲಿ ಬೋರ್ ಆಗಿದ್ದು ಏನು? ವ್ಯಕ್ತಿಯೇ? ಅಥವಾ ಸಂಬಂಧವೇ? ಇನ್ನು ಮಕ್ಕಳು, ನಾವೆಷ್ಟು ಫೂಲ್‌ಗಳು ಎಂದರೆ ನಮ್ಮ ಪೊಟೆನ್ಸಿ ತೋರ್ಸಕ್ಕೆ ಮಾಡ್ಕೊಳ್ಳೊ ಜೀವಗಳು. ನಂಗೆ ನನ್ನಿಂದ ಉಳಿಯುವಂಥದ್ದೂ ಏನೂ ಇಲ್ಲ. ಐ ವಾಂಟ್ ಟು ಬಿ ಫರ್ಗಾಟನ್. ನೀನ್ಯಾಕೆ ನನ್ನ ಹಾಳು ಮಾಡ್ತಿದೀಯಾ. ಈ ಪ್ರೀತಿ ನಮ್ಮನ್ನು ಕೊಂದು ಹಾಕುತ್ತದೆ. ಅದು ನಮ್ಮನ್ನು ಬೇರೆ ರೀತಿ ಮಾಡಿಬಿಡುತ್ತದೆ. ಒಂಥರಾ ರೊಬೋಟ್‌ಗಳ ಹಾಗೆ. ಆಮೇಲೆ ಅದಕ್ಕೆ ಸ್ಪಂದಿಸಲೇಬೇಕು' ಎನ್ನುತ್ತಿದ್ದವನನ್ನು ಅಪ್ಪಿಕೊಂಡು ಎದೆಗೊರಗಿದಳು. ಅವಳ ನಡುಗುತ್ತಿದ್ದ ತುಟಿಗಳನ್ನು ನೋಡಿ ಅವನೂ ಚಂಚಲನಾದ. ತೋಳುಗಳ ಹಾರ ಹಾಕಿದವಳನ್ನು ಮೃದುವಾಗಿ ಎತ್ತಿ ಹಾಸಿಗೆಯಲ್ಲಿ ಮಲಗಿಸಿದ. ಅವಳ ಕಣ್ಣುಗಳಲ್ಲಿದ್ದ ಸಮರ್ಪಣೆ ನೋಡಿ ಒಂದು ಕ್ಷಣ ವಿಹ್ವಲನಾದ, ನಾನಿದಕ್ಕೆ ಅರ್ಹನೇ ಎಂದು. ಕೇತಕಿಯ ಅರೆತೆರೆದ ಕಣ್ಣುಗಳು ಅವನನ್ನು ತೇಲಿ ಹೋಗುವಂತೆ ಮಾಡಿದವು. ಆ ದೊಡ್ಡ ಕಣ್ಣುಗಳಿಗೆ ಮುತ್ತಿಕ್ಕಿದ,